ಕರ್ನಾಟಕ ಸರ್ಕಾರ

## ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

[ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆ]

**ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ, ಕೋಟೆ, ಬೆಂಗಳೂರು-02**

**ಕೆ.ಆರ್. ರಸ್ತೆ, ಬೆಂಗಳೂರು-560002**

**Telephone: 26708745; Tele fax: 26708745** **Email: nursingcollegebang@gmail.com**

ಸಂಖ್ಯೆ:ಶುಮವಿಬೆಂ/ವಿವಿ/53/2014-15

ನಿರ್ದೇಶಕರು ಹಾಗೂ ಡೀನ್‌ರವರ ಕಛೇರಿ
ಬೆಂಗಳೂರು-02, ದಿನಾಂಕ: 16-09-2015

### ಅಧಿಸೂಚನೆ

2015-16 ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ 2 ವರ್ಷದ ಪೋಸ್ಟ್ ಬೇಸಿಕ್ ಬಿ.ಎಸ್ಸಿ ನರ್ಸಿಂಗ್ ಕೋರ್ಸ್‌ಗೆ ಬೆಂಗಳೂರಿನ ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯದಲ್ಲಿ ಭರ್ತಿಯಾಗದೆ ಖಾಲಿ ಉಳಿದಿರುವ 17 ಸೀಟುಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 187 ಎಂಎಂಇ 2013, ದಿನಾಂಕ: 22/08/2013 ರಂತೆ ಅಭ್ಯರ್ಥಿಗಳನ್ನು ಮೆರಿಟ್ ಹಾಗೂ ಮೀಸಲಾತಿಗಳಿಗೆ ಅನುಗುಣವಾಗಿ ಆಯ್ಕೆ ಮಾಡಲು ಅರ್ಹ ಖಾಸಗಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನೋಂದಣಿ ಹಾಗೂ ನೇರ ಸಂದರ್ಶನ ದಿನಾಂಕ: 28-09-2015
ಅರ್ಜಿಗಳ ನೊಂದಣಿ ಸಮಯ ಬೆಳಿಗ್ಗೆ: 10:30 ರಿಂದ 1:00 ಗಂಟೆ ವರೆಗೆ
ಸಂದರ್ಶನದ ಸಮಯ ಮಧ್ಯಾಹ್ನ 2:00 ರಿಂದ 5:00 ರವರೆಗೆ

ಸ್ಥಳ: ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬ್ಲಡ್ ಬ್ಯಾಂಕ್ ಎದುರು, ಕೋಟೆ, ಬೆಂಗಳೂರು-02.

**ಷರತ್ತುಗಳು:**

1. ಸಂದರ್ಶನದ ದಿನಾಂಕಕ್ಕೆ ಅಭ್ಯರ್ಥಿಗಳ ವಯಸ್ಸು 35 ವರ್ಷ ಮೀರಿರಬಾರದು, ಅಭ್ಯರ್ಥಿಗಳು ಕರ್ನಾಟಕ ರಾಜ್ಯದವರಾಗಿರತಕ್ಕದ್ದು.
2. ಜಿ.ಎನ್. ಎಂ. ವಿದ್ಯಾರ್ಹತೆಯುಳ್ಳ ಖಾಸಗಿ ಅಭ್ಯರ್ಥಿಗಳಾಗಿರಬೇಕು. ಕೆ.ಎನ್.ಸಿ ಯಲ್ಲಿ ನೊಂದಾಯಿಸಿರಬೇಕು ಮತ್ತು ಕನಿಷ್ಠ 2 ವರ್ಷಗಳ ಸೇವಾ ಅನುಭವ ಇರಬೇಕು.
3. ಪ.ಜಾ / ಪ. ಪಂ / ಪ್ರವರ್ಗ -1 ರ ಅಭ್ಯರ್ಥಿಗಳಿಗೆ ಡಿ.ಡಿ ರೂ. 500/- ಮತ್ತು ಇತರೆ ಎಲ್ಲಾ ಅಭ್ಯರ್ಥಿಗಳಿಗೆ ಡಿ.ಡಿ. ರೂ. 1000/- ಗಳನ್ನು ಪ್ರಾಂಶುಪಾಲರು, ಸರ್ಕಾರಿ ಶುಶ್ರೂಷ ಮಹವಿದ್ಯಾಲಯ, ಕೋಟೆ, ಬೆಂಗಳೂರು ಇವರ ಹೆಸರಿಗೆ ಪಡೆದ ಡಿಡಿಯನ್ನು ಅರ್ಜಿಯೊಂದಿಗೆ ಲಗತ್ತಿಸುವುದು.

ಹೆಚ್ಚಿನ ಮಾಹಿತಿಗೆ Web site: www. bmcri.org ನಲ್ಲಿ ಮಾಹಿತಿ ಪಡೆಯತಕ್ಕದ್ದು ಹಾಗೂ ಅರ್ಜಿಯನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು, ಭರ್ತಿ ಮಾಡಿದ ಅರ್ಜಿಯನ್ನು ಸಂಬಂಧಪಟ್ಟ ಅಗತ್ಯ ದಾಖಲೆಗಳೊಂದಿಗೆ ಸಂದರ್ಶನದ ದಿನಾಂಕದಂದು ಖುದ್ದಾಗಿ ಸಲ್ಲಿಸುವುದು.

ನಿರ್ದೇಶಕರು ಹಾಗೂ ಡೀನ್
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.